CALLING ATTENTION TO MATTERS OF URGENT PUBLIC IMPORTANCE

Re : Closure of Country Clothing Company Unit-I, Magadi Road, Bangalore resulting in the unemployment of 234 workers.

SRI S. S. ARAKERI.—Sir, I call the attention of the Minister for Labour to the Closure of the Country clothing Company Unit-I, Magadi Road, Bangalore, resulting in the unemployment of 234 workers, who have been in the streets for food and shelter for their children.

SRI A. B. JAKANUR (Minister for Labour).—Sir, I will make the following statement.

The Country Clothing Company (Unit-I) situated at Magadi Road was closed down on 27-10-1980 due to financial difficulties. About 234 workers were rendered unemployed. A Joint Meeting with the representatives of the mangement and the workers was convened by the then Minister for Labour on 14-11-1980. At the meeting it was suggested to the management to accommodate these jobless tailors in sumilar industries and to pay statutory and terminal benefits to all the workmen which was agreed by both parties.

Accordingly the management have provided alternative jobs to 80 workmen and in another 60 cases though jobs were provided the workmen did not accept. As regards the remaining persons the management were not able to do anything in view of the prevailing conditions in the tailoring industry. However, management have paid statutory and terminal benefits to all the workmen. All but four workers have accepted the benefits. These four workers have raised a dispute before the Assistant Labour Commissioner, Bangalore which is being investigated by him.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ಇದರಲ್ಲಿ ಸುಮಾರು ೮೦ಜನ ಟೈಲರ್ಸ್‌ಗೆ ಆಲ್ಟರ್‌ನೇಟೀವ್ ಜಾಬ್ಸ್ ಕೊಟ್ಟಿದ್ದಾರೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇನ್ನೂ ಸುಮಾರು ೧೬೦ ಜನರು ಬೀದಿಪಾಲಾಗಿದ್ದಾರೆ, ಈ ಕಂಟ್ರಿ ಕ್ಲೋತಿಂಗ್‌ಯೂನಿಟ್-೧ ಇದು ಏನು ಇದೆ ಇದನ್ನು ಆರ್ಥಿಕಮುಗ್ಗಟ್ಟಿನಿಂದ ಮುಚ್ಚಿಲ್ಲ ಅನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಅಲ್ಲದೆ ಈ ಟೈಲರ್ಸ್‌ಗೆ ಇನ್ನೂ ಹೆಚ್ಚು ವೇಜಸ್ ಕೊಡಬೇಕಾಗುತ್ತದಲ್ಲಾ ಅಂತ ಅದನ್ನು ತಪ್ಪಿಸುವುದಕ್ಕೋಸ್ಕರವಾಗಿ ಈ ಕಂಪೆನಿಯನ್ನು ಮುಚ್ಚಿದ್ದಾರೇ ವಿನಾ ಆರ್ಥಿಕ ಮುಗ್ಗಟ್ಟಿನಿಂದ ಇದನ್ನು ಮುಚ್ಚಿಲ್ಲ ಅನ್ನುವ ಮಾತನ್ನು ನಾನು ಸ್ಪಷ್ಟ ಪಡಿಸಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಈ ಮ್ಯಾನೇಜ್‌ಮೆಂಟಿನವರು ಬೇರೆ ಬೇರೆ ಕಡೆಗಳಲ್ಲಿ ಅನೇಕ ಟೈಲರಿಂಗ್ ಷಾಪ್ಸ್ ಗಳನ್ನು ತೆರೆದು ಅಲ್ಲಿ ಹೊಸಬರಿಗೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಆದುದರಿಂದ Is it not a cheating of the Government and the tailors who had put in more than ten to fifteen years of service ? ಈ ಬಗ್ಗೆ ಸರ್ಕಾರ ಏನು ಇನ್‌ವೆಸ್ಟಿಗೇಷನ್ ಮಾಡಿದೆ ?

ಮೂರನೆಯದಾಗಿ ಅವರಿಗೆ ಏನು ಬೆನಿಫಿಟ್ಸ್ ಸಲ್ಲಬೇಕಾಗಿದೆಯೋ ಅದನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ, ಅದು ಸರ್ಕಾರದ ಕರ್ತವ್ಯ. ಅದರಿಂದ ಅವರಿಗೆ ಆ ಬೆನಿಫಿಟ್ಸ್ ಸಿಕ್ಕಿದೆ. ಈ ಲೇಬರ್ ಲೀಡರ್ಸ್ ನೆಗೋಷಿಯೇಟ್ ಮಾಡಿದ್ದರಿಂದ ೮೦ ಜನರಿಗೆ ಆಲ್ಟರ್‌ನೇಟೀವ್ ಜಾಬ್ಸ್ ಕೊಟ್ಟಿದ್ದಾರೆ, ಮತ್ತು ಅದರಲ್ಲಿ ಇನ್ನೂ ಉಳಿಕೆ ಜನರು ಏನು ಇದ್ದಾರೆ ಅವರು ಬೀದಿ ಪಾಲಾಗಿದ್ದಾರೆ. ಆದುದರಿಂದ ನಾನಂ ಹೇಳುವುದೇನೆಂದರೆ ಸರ್ಕಾರದವರು ಆ ಮ್ಯಾನೇಜ್‌ಮೆಂಟಿನವರ ಮೇಲೆ ನ್ಯಾಯವಾದ ಒತ್ತಾಯವನ್ನು ತಂದು ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಕೇಳುತ್ತೇನೆ. ಏತಕ್ಕೆಂದರೆ ಅವರು ಪ್ರೈವೇಟ್ ಆಗಿ ಕೆಲವು ಕಡೆಗಳಲ್ಲಿ ಟೈಲರಿಂಗ್ ಷಾಪ್ಸ್‌ಗಳನ್ನು ನಡೆಸಿ. ಅಲ್ಲಿ ತಯಾರಾದಂಥಾ ಬಟ್ಟೆಗಳನ್ನು ಪರ ದೇಶಕ್ಕೆ ಕಳುಹಿಸುತ್ತಿದ್ದಾರೆ. Management is not so poor. They are simply cheating the Government and the workers. I would like to know what action the Government proposes to take against the Management ?

ಶ್ರೀ ಎ. ಬಿ. ಜಕನೂರ್.—ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಅವರು ತಮ್ಮ ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಕಂಪನಿಯನ್ನು ಮುಚ್ಚಿಲ್ಲ, ಅಲ್ಲಿಯ ಕಾರ್ಮಿಕರನ್ನು ಹೊರಕ್ಕೆ ಹಾಕುವ ಸಲುವಾಗಿ ಅದನ್ನು ಮುಚ್ಚಿದ್ದಾರೆ ಅನ್ನುವ ಅಂಶವನ್ನು ತಿಳಿಸಿದ್ದಾರೆ. ನಿಜವಾಗಿ ಹೇಳಬೇಕಾದರೆ ಅವರು ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದ ಕಾರಣ ಅವರು ಆ ಕ್ರಮವನ್ನು ಕೈಗೊಂಡರು. ಮತ್ತು ಆಗಿನ ಲೇಬರ್ ಮಂತ್ರಿಗಳು ಅವರನ್ನು ಕರೆಸಿ ಒತ್ತಾಯ ತಂದಿದ್ದರಿಂದ ಅವರಿಗೆ ಆಲ್ಟರ್‌ನೇಟಿವ್ ಜಾಬ್ಸ್ ಆದರೂ ಕೊಟ್ಟು ಕೆಲಸಕ್ಕೆ ತೆಗೆದುಕೊಳ್ಳಬೇಕಾಯಿತು, ಆ ಪ್ರಕಾರ ಸುಮಾರು ೧೪೦ ಜನರಿಗೆ ಆ ಮ್ಯಾನೇಜ್‌ಮೆಂಟಿನವರು ಕೆಲಸ ಕೊಟ್ಟರು. ಅದರಲ್ಲಿ ೮೦ ಮಂದಿ ಕೆಲಸಕ್ಕೆ ಬಂದರು ಇನ್ನು ೬೦ ಮಂದಿಗೆ ಕೆಲಸ ಕೊಟ್ಟರೂ ಕೂಡ ನಾವು ಹೋಗುವುದಿಲ್ಲ ಎಂದರು. ಅಂಥಾವರಿಗೆ ಸ್ಪ್ಯಾಚುಟರಿ ಮತ್ತು ಬೆನಿಫಿಟ್ಸ್ ಏನು ಬರಬೇಕೋ ಅದನ್ನು ಕೊಟ್ಟಿದ್ದಾರೆ. ಅದರಲ್ಲಿ ಇನ್ನೂ ೪ ಜನರು ಅದನ್ನು ತೆಗೆದುಕೊಂಡಿಲ್ಲಾ. ನಮ್ಮ ಕಾಯಿದೆ ಪ್ರಕಾರ ಆರ್ಥಿಕ ಪರಿಸ್ಥಿತಿ, ಆರ್ಥಿಕ ಮುಗ್ಗಟ್ಟು ಇದ್ದರೆ ಅಂಥಾ ಕಾರ್ಖಾನೆಗಳನ್ನು ಬಂದ್ ಮಾಡಲಿಕ್ಕೆ ಅಧಿಕಾರ ಇದೆ. ಹಾಗೆ ಆರ್ಥಿಕ ಮುಗ್ಗಟ್ಟು ಇದ್ದರೂ ಕೂಡ ಅವರಿಗೆ ಸ್ಪ್ಯಾಚುಟರಿ ಮತ್ತು ಜೆ ಟರ್ಮಿನಲ್ ಬೆನಿಫಿಟ್ಸ್ ಏನು ಬರಬೇಕೋ ಅದನ್ನು ಸರ್ಕಾರದವರು ಪ್ರಯತ್ನಮಾಡಿ ಅವರಿಗೆ ಕೊಡಿಸಿದ್ದಾರೆ. ಕಾಯಿದೆ ಪ್ರಕಾರ ಕ್ಲೋಸ್ ಮಾಡಬೇಡಿ ಎಂದು ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ,—ಸ್ವಾಮಿ, ನನಗೆ ಗೊತ್ತಿದೆ. ಆರ್ಥಿಕ ಮುಗ್ಗಟ್ಟಿನಿಂದ ಮುಚ್ಚಿದ್ದರೆ ಅದು ಬೇರೆ ವಿಷಯ ಅವರು ಬೇರೆ ಬೇರೆ ಕಡೆಗಳಲ್ಲಿ ಷಾಪ್ಸ್‌ಗಳನ್ನು ತೆರೆದಿದ್ದಾರೆ. ಬೇಕಾದರೆ ತಮ್ಮ ಸಿ.ಐ.ಡಿ. ಬಿಟ್ಟು ತನಿಖೆ ಮಾಡಿಸಿ, ಎಷ್ಟು ಕಡೆಗಳಲ್ಲಿ ಈ ಮ್ಯಾನೇಜ್‌ಮೆಂಟ್‌ನವರು ಅಂಗಡಿಗಳನ್ನು ತೆರೆದಿದ್ದಾರೆ ಅನ್ನುವುದು ಗೊತ್ತಾಗುತ್ತದೆ. ಇಲ್ಲದೇ ಹೋದರೆ ಆ ಬಗ್ಗೆ ನಾನು ಸಿದ್ಧ ಮಾಡಿ ಕೊಡುತ್ತೇನೆ. ಸರ್ಕಾರದವರು ಆ ಬಗ್ಗೆ ಏನಾದರೂ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಶ್ರೀ ಐ. ಪಿ. ಡಿ. ಸಾಲಪ್ಪ.—ಅಧ್ಯಕ್ಷರೇ, ನಾನೂ ಕೂಡ ಅದೇ ಕ್ಷೇತ್ರದಲ್ಲಿರುವುದರಿಂದ ಆ ಬಗ್ಗೆ ಹೇಳುವುದಕ್ಕೆ ನನಗೆ ಸ್ವಲ್ಪ ಅವಕಾಶ ಮಾಡಿಕೊಡಬೇಕು.

ಶ್ರೀ ಎ. ಬಿ. ಜಕನೂರ್.—ನಾನು ಮೊದಲೇ ಹೇಳಿದ ಹಾಗೆ ಅದರಲ್ಲಿ ೮೦ ಜನ ವರ್ಕ್‌ಮನ್‌ಗೆ ಆಲ್ಟರ್‌ನೇಟೀವ್ ಜಾಬ್ಸ್ ಪ್ರೊವೈಡ್ ಮಾಡಿದ್ದಾರೆ. ಇನ್ನು ೬೦ ಜನರಿಗೆ ಕೆಲಸ ಕೊಟ್ಟರೂ ಕೂಡ ಅವರು ಹೋಗಲಿಲ್ಲಾ. ಕೆಲವರಿಗೆ ಏನು ಬೆನಿಫಿಟ್ಸ್ ಬರಬೇಕೋ ಅದನ್ನು ತೆಗೆದುಕೊಂಡಿದ್ದಾರೆ. ಯಾರಾದರೂ ಕೆಲಸಕ್ಕೆ ಹೋಗುವುದಕ್ಕೆ ಸಿದ್ಧವಾಗಿದ್ದರೆ ಅಂಥಾವರಿಗೆ ಕೆಲಸ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್, ಎಸ್. ಅರಕೇರಿ,—ಸ್ವಾಮಿ, ಆ ಮ್ಯಾನೇಜ್‌ಮೆಂಟಿನವರು ಬೇರೆ ಬೇರೆ ಕಡೆಗಳಲ್ಲಿ ಷಾಪ್ಸ್‌ಗಳನ್ನು ತೆರೆದಿದ್ದಾರೆ, ಅದನ್ನು ನಾನು ಸಿದ್ಧ ಮಾಡಿ ತೋರಿಸುತ್ತೇನೆ, ನೀವು ಏನು ಆಕ್ಷನ್ ತೆಗೆದುಕೊಳ್ಳುತ್ತೀರಾ ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳಿಂದ ಸರಿಯಾದ ಉತ್ತರ ಬರಲಿಲ್ಲಾ.

(ಉತ್ತರವಿಲ್ಲಾ)

(ii) Irrigation at Gosadan Yemmedoddi, Kadur Taluk.

SRI K.M. THAMMAIAH.—Sir, I call the attention of the Minister for law, Parliamentary Affairs, Veterinary and Animal Husbandary to the serious irregularities at Gosadan, Yemmedoddi. Kadur Taluk. Chickamagalur District.

SRI Y. RAMAKRISHNA (Minister for Law, Parliamentary Affairs, Veterinary and Husbandry).—

As early as 1978 Government accorded sanction for the release of 280 acres of Amrithmahal Kaval lands to the Helwar Community since they had constructed huts and school buildings.

There are several representations for release of Amrithmahal Kaval lands in Yemmedoddi. The unauthorised cultivation is to an extent of about 1,405.27 acres by the neighbouring villagers for the last about 15 years is still undecided. The Deputy Commissioner and the Police were requested to evict the unauthorised occupants.

The Deputy Commissioner visited alone with the Superintendent of Police, Asst. Commissioner, Tarikere Divisional Forest Officer, Chickmagalur and the Senior Asst. Director of Animal Husbandary & Vetarinary Services, Ajjampur and had opined that this unauthorised occupation has been there for a pretty long time in the Amrithmahal Kaval lands and they have established a Society, a School and dug a well in Srirampura and Rangapura Colonies. They are now treated as regular inhabitants and the Deputy Commissioner opined that they cannot be evicted at this distance of time. The Deputy Commissoner is also of the opinion to release 700 acres of land out of this Kaval from the control of the Department of Animal Husbandry & Veterinary Services. Since such unauthorised occupation is there for the last so many years, there are several reports of further encroachments even now inipite of circular instructions from the Government to evict such unauthurised occupants They still continue to exist there in view of no support being given by the Revenue and Police Departments to the Department of Animal Husbandry & Veterinary Services to evict them.

It is also learnt from the Deputy Commissioner that some of these unauthorised occupants have filed cases before the Asst. Commissioner and Munsiff Court, Tarikere for regularisation of their unauthorised cultivation.

As to the encrochments on Gosadan land at Yemmedoddi Kaval, Kadur Taluk, an extent of about 2,600 acres of land is under the control of the Department of Animal Husbandary & Vetarinary Services Some more encroachments by farmers are reported, Neither officials

of the Department nor the Kavalgars have encroached on the Kaval lands.

Government have already introduced a Bill before this Hon. House preventing further encrochments and provided eviction provisions against unauthorised cultivators.

ಶ್ರೀ ಕೆ.ಎಂ. ತಮ್ಮಯ್ಯ.—ಅಧ್ಯಕ್ಷರೇ, ನಾನು ಗಮನ ಸೆಳೆದಿರುವ ವಿಚಾರವೇ ಬೇರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರವೇ ಬೇರೆ. ಇದರಲ್ಲಿ ಸ್ವಲ್ಪ ಕನ್‌ಫ್ಯೂಷನ್ ಆಗಿದೆ. ಆದರೂ ಸ್ವಲ್ಪವಾಟ್ಟಿಗೆ ಪ್ರಯೋಜನವಾಗಿದೆ. ನಾನು ಗಮನ ಸೆಳೆದಿರುವ ವಿಚಾರ ಈ ಗೋಸದನಕ್ಕೆ ಜೈನ್ ಕಮಿಟಿಯವರು ಒಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಏತಕ್ಕಂದರ ವಯಸ್ಸಾದ ದನಗಳನ್ನು, ಸಾಕ ಲಿಕ್ಕೆ ಎಂದು. ಈಗ ಆಲ್ಲಿ ಏನಾಗಿದೆ ಅನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಆಲ್ಲಿ ಏನು ನಡೆಯುತ್ತಾ ಇದೆ ತಾವು ಈಗ ಹೇಳಿದ್ದೀರಿ ಅದೂ ಕೂಡ ಸರಿಯಾಗಿದೆ. ಆದರೆ ನಾನು ಕೇಳುವುದೇನೆಂದರೆ. ಈ ಗೋಸದನದಲ್ಲಿ ಪ್ರಾಣಿಗಳಿಗೆ ಯಾವ ರೀತಿಯಾದಂಥಾ ವಸತಿ ಮಾಡಿದ್ದೀರಾ, ಒಂದು. ಮತ್ತು ಈ ಜೈನ್ ಕಮಿಟಿಯವರು ಇದಕ್ಕಾಗಿ ಒಂದು ಲಕ್ಷ ರೂಪಾಯಿ ಕೊಟ್ಟರಲ್ಲಾ ಆದರಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಆಲ್ಲಿ ಕೆಲವು ಕಟ್ಟಡಗಳು ಏನು ಇವೆ ಅವೆಲ್ಲಾ ಶಿಥಿಲವಾಗಿವೆ ಮತ್ತು ಬಿರುಗಾಳಿ ಬಂದು ಆಲ್ಲಿ ಕೆಲವು ಕಟ್ಟಡಗಳಲ್ಲಿ Asbestos sheets ಗಳು ಏನು ಇತ್ತು, ಅವೆಲ್ಲಾ ಹೋಗಿವೆ. ಈ ಕಟ್ಟಡದ ರಿಪೇರಿಗಾಗಿ ಸರ್ಕಾರದವರು ಇದುವರೆಗೆ ಏನು ಖರ್ಚು ಮಾಡಿದ್ದಿರೆ ಮತ್ತು ಏನು ಸಿಬ್ಬಂದಿ ವರ್ಗ ಇದೆ ಅವರನ್ನು ಜನರು ಹೊಡೆದಿದ್ದಾರೆ. ಮತ್ತು ಈ ಗೋಸದನಕ್ಕೆ ಸರ್ಕಾರದವರು ಎಷ್ಟು ಜಮೀನು ಕೊಟ್ಟಿದ್ದಾರೆ ಮತ್ತು ಆದರಲ್ಲಿ ಎಷ್ಟು ಜಮೀನು ಎನ್‌ಕ್ರೋಚ್‌ಮೆಂಟ್ ಆಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಆಲ್ಲಿನ ಸ್ಟ್ಯಾಫ್‌ನ್ನು ಜನರು ಹೊಡೆದಿದ್ದಾರೆ ಎಂದುಪೋಲಿ ಸಿನವರಿಗೆ ದೂರು ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ಆ ಜೈನ್ ಕಮಿಟಿಯವರು ಒಳ್ಳೆಯ ಕೆಲಸಕ್ಕೆ ಈ ಒಂದು ಲಕ್ಷ ರೂಪಾಯಿ ಕೊಟ್ಟಿರತಕ್ಕಂಥಾದ್ದು. ೨೦ ವರ್ಷದಿಂದಲೂ ಅದು ಹಾಗೇಯೇ ಇದೆ. ಈ ಬಗ್ಗೆ ನಾನು ಕೇಳುವುದೇನೆಂದರೆ ಆಲ್ಲಿ ಸ್ಟ್ಯಾಫ್‌ಗೆ ಏನೇನು ಅನುಕೂಲಗಳನ್ನು ಮಾಡಿಕೊಟ್ಟಿದ್ದೀರಾ ಮತ್ತು ಆ ಮೂಕಪ್ರಾಣಿಗಳಿಗೆ ಏನೇನು ಸೌಕರ್ಯಗಳನ್ನು ಒದಗಿಸಿದ್ದೀರಾ ಅನ್ನುವುದನ್ನು ಹೇಳುತ್ತೀರಾ?

ಶ್ರೀ ವೈ. ರಾಮಕೃಷ್ಣ.—ಗೋಸದನಕ್ಕೆ ಕೊಟ್ಟಂಥ ಭೂಮಿಯಲ್ಲಿ ಕೆಲವು ಜಮೀನುಗಳನ್ನು ಅನ್‌ಅಥರೈಸ್ಡ್ ಆಗಿ ಕಲ್ಟಿವೇಟ್ ಮಾಡುತ್ತಿದ್ದಾರೆ. ಕೆಲವು ಬಿಲ್ಡಿಂಗ್ಸ್‌ನ್ನೂ ಸಹ ಕಟ್ಟಿದೆ. ಆದರೆ ಹೆಚ್ಚಿನ ಮಳೆ ಗಾಳಿಯಿಂದ ಅವುಗಳ ರೂಫ್‌ಗೆ ಸ್ವಲ್ಪ ಡ್ಯಾಮೇಜ್ ಆಗಿದೆ. ಕೆಲವು ಬಿಲ್ಡಿಂಗ್ಸ್ ಸಹ ಡಿಲಾಜಿಲೇಟೆಡ್ ಕಂಡೀಷನ್ಸ್‌ನಲ್ಲೂ ಇದೆ. ಶೀಘ್ರವಾಗಿ ಆದರ ಬಗ್ಗೆ ಕಾರ್ಯಕ್ರಮ ಹಾಕಿಕೊಂಡು ಆ ಕಟ್ಟಡಗಳ ರಿಪೇರಿ ಮಗೈರೆ ಮಾಡಿಸುತ್ತೇವೆ. ಯಾವ ಉದ್ದೇಶಕ್ಕಾಗಿ ಆ ಜೈನ್ ಕಮಿಟಿಯವರು ದುಡ್ಡು ಕೊಟ್ಟಿದ್ದಾರೋ, ಇದು ಸಕಾಲವಾಗಿದೆ, ಆ ಬಗ್ಗೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ವರ್ಷವೇ ಆಲ್ಲಿ ಆಲ್ಲಿ ಏನೇನು ತೊಂದರೆಗಳು ಇವೆ ಅದನ್ನು ನಿವಾರಿಸುತ್ತೇವೆ ಎಂದು ಹೇಳಬಯಸುತ್ತೇನೆ.

ಶ್ರೀ ಕೆ.ಎಂ ತಮ್ಮಯ್ಯ.—ಎಮ್ಮೆದೊಡ್ಡಿಯ ಕಾವಲಿನಲ್ಲಿ ಸುಮಾರು ೧೪೦ ಎಕರೆಯಂಷ್ಟು ಎನ್‌ಕ್ರೋಚ್‌ಮೆಂಟ್ ಆಗಿ ಅದರಲ್ಲಿ ಕೆಲವರು ಆ ಹಳ್ಳಿಯಲ್ಲಿ ಸ್ಕೂಲ್ಸ್‌ನ್ನು ಕಟ್ಟಿದ್ದಾರೆ, ಇನ್ನು ಕೆಲವರು ಬಾವಿಗಳನ್ನು ತೆಗೆಸಿದ್ದಾರೆ ಎಂದು ಹೇಳಿದ್ದಾರೆ. ಹೀಗೆ ಕೆಲವರು ಸ್ಕೂಲ್ಸ್ ಬಾವಿ ವಗೈರೆ ಏನು ಮಾಡಿದ್ದಾರೆ ಆ ಜಮೀನು ಯಾರಿಗೆ ಸೇರಿದೆ ಎನ್ನುವುದನ್ನು ನಿಮ್ಮ ಇಲಾಖೆಯವರು ವಿಚಾರ ಮಾಡಿದ್ದಾರೆಯೇ? ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಈ ರೀತಿಯಾಗಿ ಕೊಡುತ್ತಾ ಹೋದರೆ ನಮ್ಮ ಜಾನುವಾರು ಸಂಖ್ಯೆ ಏನು ಇದೆ ಆ ದನಗಳಿಗೆ ಮೇಯಲಿಕ್ಕೆ ಏನು ಮಾಡಬೇಕು, ಸುಮಾರು ೩ ಸಾವಿರ ಆಷ್ಟು ಆಲ್ಲಿ ದನಗಳ ಸಂಖ್ಯೆ ಇದೆ. ಈ ರೀತಿಯಾಗಿ ಆ ಕಾಡೆಲ್ಲಾ ಹೋದಮೇಲೆ ಆ ದನಗಳು ನಿಲ್ಲುವುದಕ್ಕೆ ಜಾಗ ಇಲ್ಲಾ, ಮೇಯುವುದಕ್ಕೆ ಹುಲ್ಲು ಇಲ್ಲದೇ ಇದ್ದ ಹಾಗೆ ಆಗುತ್ತದೆ. ಇಂಥಾ ಸ್ಥಿತಿಯಲ್ಲಿದ್ದರೂ ಕೂಡ ಡೆಪ್ಯುಟಿ ಕಮಿಷನರು ಇನ್‌ಸ್ಪೆಕ್ಟ್ ಮಾಡಿ ಅದನ್ನು ರಿಲೀಸ್ ಮಾಡಿ ರಂದು ಬರೆದು ಹಾಕಿದರೆ ಆ

ಬಗ್ಗೆ ತಾವೇನಾದರೂ ಪರಿಶೀಲಿಸುತ್ತೀರಾ? ಆ ಜನಗಳು ಯಾರ್ಯಾರು ಎನ್ನುವುದು ತಮಗೆ ಗೊತ್ತಾಗುತ್ತದೆಯೇ? ಆದರಲ್ಲಿ ಬಾಕ್‌ವರ್ಡ್ ಎಷ್ಟು ಜನ ಇದ್ದಾರೆ, ನಿಮ್ನವರ್ಗಕ್ಕೆ ಸೇರಿದವರು ಎಷ್ಟು ಜನ ಇದ್ದಾರೆ ಎನ್ನುವುದನ್ನು ತಾವೇನಾದರೂ ನೋಡಿದ್ದೀರಾ?

ಆದರಲ್ಲಿ ನನಗೆ ತಿಳಿದಮಟ್ಟಿಗೆ ಹೊರಗಡೆಯಿಂದ ಬಂದಿರುವವರು ಅಲ್ಲಿ ಊರಿನಲ್ಲಿ ಜಮೀನು ಇಟ್ಟುಕೊಂಡು ಇಲ್ಲಿ ಒಳ್ಳೆಯ ಜಮೀನನ್ನು ಮಾಡುವುದಕ್ಕಾಗಿ ಬಂದಿರುವವರು ಹೆಚ್ಚಾಗಿ ಇದ್ದಾರೆ. ನಾಳೆ ನೀವು ಈ ಬಗ್ಗೆ ರೆಕ್‌ಮೆಂಡ್ ಮಾಡಿ ಆ ಲ್ಯಾಂಡನ್ನು ರಿಲೀಸ್ ಮಾಡುತ್ತಾ ಹೋದರೆ ಜಾನುವಾರುಗಳ ಗತಿ ಏನು? ಅದನ್ನು ರಕ್ಷಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ? ಆಲ್ಲಿ ಎವಿಕ್ಷನ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಾ? ೧೭ ವರ್ಷದಿಂದ ಅಧಿಕಾರಿಗಳು ಇನ್ಸ್‌ಪೆಕ್ಷನ್ ಮಾಡಿ ರಿಪೋರ್ಟನ್ನು ಕೊಡುತ್ತಿದ್ದಾರೆ. ಆದರೆ ಅವರು ಎವಿಕ್ಷನ್ ಮಾಡಿಸಲಿಲ್ಲ ನಿಮ್ಮ ಡಿಪಾರ್ಟ್‌ಮೆಂಟ್ ನವರನ್ನು ಹೊಡೆದು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಲಾಕಪ್‌ನಲ್ಲಿ ಹಾಕಿದ್ದು ನನ್ನ ಗಮನಕ್ಕೆ ಬಂದಾಗ ನಾನೇ ಪೋಲೀಸ್ ಸ್ಟೇಷನ್‌ಗೆ ಹೋಗಿ ಅವರನ್ನು ಬಿಡಿಸಿದ್ದೇನೆ. ನಿಮ್ಮ ಡಿಪಾರ್ಟ್‌ಮೆಂಟ್ ಅಧಿಕಾರಿಗಳು ಅಲ್ಲಿಗೆ ಹೋದರೆ ಅವರಿಗೆ ಲೆಕ್ಕವೇ ಇಲ್ಲ. ಅವರು ರಾತ್ರಿಯೆಲ್ಲಾ ಗೋಸದನದಲ್ಲಿರುವ ಹುಲ್ಲನ್ನು ಮೇಯಿಸಿಕೊಳ್ಳುವುದು, ನಿಮ್ಮ ಜಾನುವಾರುಗಳಿಗೆ ಹುಲ್ಲು ಇಲ್ಲದೇ ಇರುವುದು ಈ ರೀತಿ ನಡೆಯುತ್ತ ಇದೆ. ಇದನ್ನು ನಿಮ್ಮ ಗಮನಕ್ಕೆ ತಂದಾಗಲೂ ಕೂಡ ಈ ವಿಚಾರ ಕೋರ್ಟ್‌ನವರೆಗೂ ಹೋಗಿರುವುದು ಇದೆ. ಇದಕ್ಕೆ ತಕ್ಷಣ ಏನಾದರೂ ಬಂದೋಬಸ್ತ್ ಮಾಡುತ್ತೀರಾ?

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಗೋಸದನದ ಕಾರ್ಯಕ್ರಮಗಳ ಪಟ್ಟಿಯಲ್ಲಿ ಅಲ್ಲಿ ಹುಲ್ಲು ಬೆಳೆಯತಕ್ಕಂಥ ಕಾರ್ಯಕ್ರಮವನ್ನು ನಾವು ಈಗಾಗಲೇ ಹಾಕಿಕೊಂಡು ಸುಮಾರು ೩೦ ಎಕರೆಯಲ್ಲಿ ಫಾರೆಸ್ಟ್‌ನಲ್ಲಿ ಹುಲ್ಲು ಬೆಳೆದಿದ್ದೇವೆ. ಆದರೆ ಅನ್‌ಆತರೈಸ್ಡ್ ಆಕ್ಯುಪೇಷನ್ ಎಷ್ಟಾಗಿವೆ ಎಂದರೆ, ನಾನು ಮೊದಲೇ ಹೇಳಿದಹಾಗೆ ಅಲ್ಲಿ ಏನ್ಮೆ ಬೊಡ್ಡಿಯಲ್ಲಿ ೩೯೦೦ ಎಕರೆ ಅಮೃತಮಹಲ್ ಲ್ಯಾಂಡ್ ಇದ್ದರೆ ೧೩೦೦ ಎಕರೆಯಲ್ಲಿ ಎನ್‌ಕ್ರೋಚ್ ಆಗಿದೆ. ಇನ್ನು ಉಳಿದಿರತಕ್ಕಂಥ ೨೬೦೦ ಎಕರೆಯಲ್ಲಿ ಮಾತ್ರ ಎನ್‌ಕ್ರೋಚ್‌ಮೆಂಟ್ ಆಗುವುದಕ್ಕೆ ನಮ್ಮ ಡಿಪಾರ್ಟ್‌ಮೆಂಟ್‌ನವರು ಅನುಮತಿ ಕೊಟ್ಟಿಲ್ಲ. ಅಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೆ. ತಾವು ಹೇಳಿದಹಾಗೆ ಪೋಲೀಸ್ ಡಿಪಾರ್ಟ್‌ಮೆಂಟ್‌ನವರಿಗೆ ಹೇಳಿದ್ದು ಆಯಿತು. ರೆವೆನ್ಯೂ ಡಿಪಾರ್ಟ್‌ಮೆಂಟ್‌ನವರಿಗೆ ಹೇಳಿದ್ದಾಯಿತು; ಅನೇಕರ ಮೇಲೆ ಕೇಸ್ ಹಾಕಿದ್ದು ಆಯಿತು ಮತ್ತು ಕೌಂಟರ್ ಕೇಸ್ ಹಾಕಿದ್ದು ಆಯಿತು. The matter is still under litigation. ಈ ಸದನದ ಮುಂದೆ ಈಗಾಗಲೇ ನಾವು ಒಂದು ಮಸೂದೆಯನ್ನು ತೆಗೆದುಕೊಂಡು ಬಂದಿದ್ದೇವೆ. ಈ ಅಮೃತ ಮಹಲ್ ಲ್ಯಾಂಡ್ ಏನಿದೆ ಈ ೫೪ ಸಾವಿರ ಎಕರೆಗಳನ್ನು ನಾವು ಬಂದೋಬಸ್ತ್ ಮಾಡಿಕೊಂಡು ಆದರಲ್ಲಿ ಹುಲ್ಲು ಬೆಳೆಸಬೇಕು ಎನ್ನತಕ್ಕಂಥ ಉದ್ದೇಶದಿಂದ ಮತ್ತು ಅದನ್ನು ಯಾರಿಗೂ ಕೊಡಬಾರದು ಎನ್ನತಕ್ಕಂಥ ಉದ್ದೇಶದಿಂದ ಈ ಬಿಲ್ಲನ್ನು, ಈ ಸೆಷನ್‌ನಲ್ಲೇ ಇಲ್ಲಿ ಪಾಸ್ ಮಾಡಿಸುತ್ತೇವೆ ಆದರ ಪ್ರಕಾರ ಯಾವಾದರೂ ಅಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿದರೆ ಅಂತಹವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನಾವು ಆ ಒಂದು ಕಾನೂನಿನಲ್ಲಿ ಅಳವಡಿಸಿದ್ದೇವೆ. ಅವರ್ಯಾರಿಗೂ ಆ ಲ್ಯಾಂಡನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ನಾವು ಹಿಂದೆ ಯಾವಾಗಲೂ ಕೊಟ್ಟಿಲ್ಲ. ನಾವು ಆ ಲ್ಯಾಂಡನ್ನು ಯಾರಿಗೂ ಕೊಡುವುದಿಲ್ಲ. ನಾವು ಅದನ್ನು ಭದ್ರಪಡಿಸುತ್ತೇವೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೆ, ಈ ೫೪ ಸಾವಿರ ಎಕರೆಯಷ್ಟು ಜಮೀನು ಈ ಅಮೃತಮಹಲ್ ಕಾವಲ್‌ನಲ್ಲಿ ಇದೆಯೆಂದು ಅವರು ತಿಳಿಸಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕ ಅಮೃತ ಮಹಲ್ ಹಾವಲಿನ ೫೪ ಸಾವಿರ ಎಕರೆ ಪ್ರದೇಶದಲ್ಲಿ ಮೇಯುವುದಕ್ಕೆ ಹೋಗುವಂತ ರಾಸುಗಳು ನಮ್ಮ ಸರ್ಕಾರದವರ ವ್ಯವಸ್ಥೆಯಲ್ಲಿ ಎಷ್ಟಿವೆ ಎಂದರೆ ಅವು ೨ ಸಾವಿರ ರಾಸುಗಳು ಮಾತ್ರ. ಕಾಲ ಹೇಗೆ ಬರುತ್ತಾ ಇದೆ ಎಂದರೆ ಈ ದೇಶದಲ್ಲಿ ಹೊಟ್ಟೆಗಿಲ್ಲದೇ ಇರುವವರು, ಬಟ್ಟೆಗಿಲ್ಲದೇ ಇರುವವರು, ಉಳುವುದಕ್ಕೆ ಒಂದು ಇಂಚು ಭೂಮಿ ಇಲ್ಲದೇ ಇರುವವರು ಅನೇಕ ಜನ ಆ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಅವರಲ್ಲಿ ೧೦೦ಕ್ಕೆ ೮೦ ಭಾಗದಷ್ಟು ಜನ ನಿಮ್ನವರ್ಗಕ್ಕೆ ಸೇರಿದವರಿದ್ದಾರೆ. ಅಲ್ಲಿ ಅವರು ೧೦-೧೫-೨೦ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಆ ಜಮೀನನ್ನು ಅವರಿಂದ ಬಿಡಿಸಿದರೆ ಶ್ರೀಮಾನ್ ವೈ. ರಾಮಕೃಷ್ಣರ ಮನೆಯ ಮುಂದೆ ಅವರೆಲ್ಲಾ ಬಂದು ಕುಳಿತುಕೊಳ್ಳಬೇಕಾಗುತ್ತವೆ.

ಅಲ್ಲಿ ಬಹಳ ವರ್ಷಗಳಿಂದ ಅವರು ಸಾಗುವಳಿ ಮಾಡಿಕೊಂಡಿದ್ದು ಅದನ್ನೇ ಜೀವನದ ಏಕೈಕ ಮಾರ್ಗವನ್ನಾಗಿ ಇಟ್ಟುಕೊಂಡಿರುವುದರಿಂದ ಆ ಜನಗಳನ್ನು ಅಲ್ಲಿಂದ ಒಕ್ಕಲೆಬ್ಬಿಸಿ ಆ ಜಮೀನನ್ನು ಬಿಡಿಸಿಕೊಂಡು ಹೊಸದಾಗಿ ಕಾನೂನು ಮಾಡುತ್ತೇವೆಂದು ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಆ ಕಾನೂನಿನ ಮುಖಾಂತರ ಅಲ್ಲಿರುವವರನ್ನೆಲ್ಲಾ ಓಡಿಸಿದರೆ ಅಲ್ಲಿ ಗೊಂದಲ ಉಂಟಾಗುವುದಿಲ್ಲವೇ? ಆದ್ದರಿಂದ ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ಕಾನೂನು ಮಾಡುವಾಗ ಆ ಒಂದು ಅಧಿಕಾರವನ್ನು ಸರ್ಕಾರ ಇಟ್ಟುಕೊಳ್ಳಲಿ. ಆದರೆ ನ್ಯಾಯವಾಗಿ ಆ ಜನರು ಅದೇ ಜಮೀನನ್ನು ಅವಲಂಬಿಸಿಕೊಂಡು ೧೦-೧೫ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ಅವರಿಗೆ ರಕ್ಷಣೆ ಕೊಡಬೇಕು. ಅಲ್ಲಿ ಸರ್ಕಾರದವರು ಹುಲ್ಲನ್ನು ಬೆಳೆಯುವ ಕ್ರಮವನ್ನು ತೆಗೆದುಕೊಳ್ಳಲಿ. ಆದರೆ ಆ ಒಟ್ಟು ೫೪ ಸಾವಿರ ಎಕರೆಯನ್ನು ೨೦೦೦ ದನಗಳಿಗೆ ಹುಲ್ಲು ಬೆಳೆಯುವುದಕ್ಕಾಗಿ ಇಟ್ಟುಕೊಳ್ಳುತ್ತಾರೆ ಎಂದರೆ ಅದು ಸರಿಯಾದ ವ್ಯವಸ್ಥೆಯಲ್ಲ. ಇದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ, ಬಹಳ ವರ್ಷಗಳಿಂದ ಅಲ್ಲಿ ಸಾಗುವಳಿ ಮಾಡುತ್ತಿರುವವರಿಗೆ ಬೇರೆ ಕಡೆ ಜಮೀನು ಇಲ್ಲದಂಥ ಆ ಜನರಿಗೆ ಮಾನ್ಯ ಮಂತ್ರಿಯವರು ರಕ್ಷಣೆಯನ್ನು ಕೊಡುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ೫೪ ಸಾವಿರ ಎಕರೆಯಲ್ಲಿ ಈ ಅಮೃತ ಮಹಲ್ ಕಾವಲ್ ಏನಿದೆ ಅದನ್ನು ನಮ್ಮ ಸರ್ಕಾರ ೨ ಸಾವಿರ ದನಗಳಿಗೆ ಮಾತ್ರ ಮೀಸಲು ಇರುತ್ತದೆ ಅಂತ ಅಲ್ಲ ನಾನು ಹೇಳಿದ್ದು. ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ದನಗಳಿಗೂ ಮೇವನ್ನು ಒದಗಿಸುವುದಕ್ಕೆ ಅದನ್ನು ಇಡುತ್ತೇವೆ. ಈ ಬಗ್ಗೆ ನಾವು ಸಮಗ್ರವಾದ ಕಾನೂನನ್ನು ತೆಗೆದುಕೊಂಡು ಬರುತ್ತೇವೆ. ಇದರಲ್ಲಿ ಗೌರ್ನಮೆಂಟ್ ದನಗಳೂ ಸಹ ಸೇರಿಕೊಂಡಿವೆ. ಮತ್ತೊಂದು ವಿಚಾರವೇನೆಂದರೆ ನಾವು ಈ ಬಗ್ಗೆ ಒಂದು ಯೋಜನೆಯನ್ನು ಮಾಡಿದ್ದೇವೆ ಮತ್ತು ಅದರ ಬಗ್ಗೆ ಭಾರತ ಸರ್ಕಾರದವರಿಗೆ ಈಗಾಗಲೇ ತಿಳಿಸಿದ್ದೇವೆ. ಯೋಜನೆಯಲ್ಲಿ ಇದನ್ನು ನಾವು ಅಳವಡಿಸಿದ್ದೇವೆ. ಈ ಯೋಜನೆಯ ಪ್ರಕಾರ ಅವರು ೨೧ ಕೋಟಿ ರೂಪಾಯಿಗಳನ್ನು (ಒಂದು ವರ್ಷಕ್ಕೆ ಐದೈದು ಕೋಟಿ ರೂಪಾಯಿಗಳ ಪ್ರಕಾರ) ೪ ವರ್ಷದಲ್ಲಿ ಇದನ್ನು ಡೆವೆಲಪ್‌ಮೆಂಟ್ ಮಾಡುವುದಕ್ಕಾಗಿ ಕೊಡುತ್ತಾರೆ. ಈಗಾಗಲೇ ನಾವು ಅವರ ಜೊತೆಯಲ್ಲಿ ಮಾತುಕತೆ ನಡೆಸಿದ್ದೇವೆ. ಆ ಜನರು ಬಹಳ ವರ್ಷಗಳಿಂದ ಅಲ್ಲಿ ನೆಲಸನ್ನು ಹಿಡಿದುಕೊಂಡಿರುವ ಪಕ್ಷಕ್ಕೆ ಅದನ್ನು ಅವರಿಗೆ ಕೊಡುವುದಕ್ಕೆ ಬರುವುದಿಲ್ಲ ಲ್ಯಾಂಡ್ ರಿಫಾರಂಸ್ ಪ್ರಕಾರ ಎಲ್ಲಿ ಎಕ್ಸೆಸ್ ಲ್ಯಾಂಡ್ ಸಿಕ್ಕುತ್ತದೆ ಅಂತಹ ಕಡೆ ಆ ಜನರಿಗೆ ಆದ್ಯತೆಕೊಟ್ಟು ಅಲ್ಲಿ ಜಮೀನು ಕೊಡಬೇಕೆ ಹೊರತು ಈ ಜಮೀನಿನಲ್ಲಿ ಕೊಡುವುದಕ್ಕಾಗುವುದಿಲ್ಲ, ಆ ರೀತಿ ಕೊಡುತ್ತೇನೆ ಎನ್ನತಕ್ಕಂಥ ಭರವಸೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಕೆ.ಎಂ. ತಮ್ಮಯ್ಯ.—ಸ್ವಾಮಿ, ನಾನು ಕೇಳುತ್ತಾ ಇರುವುದು ಏನೆಂದರೆ ಕಡೂರು ತಾಲ್ಲೂಕಿನ ಎಮ್ಮೆದೊಡ್ಡಿಯ ವಿಚಾರ. ಕಡೂರು ತಾಲ್ಲೂಕಿನ ಅಮೃತಮಹಲ್ ಕಾವಲ್‌ನಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ನಾನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಾ ಇದ್ದೇನೆ. ಈ ಸ್ಟೇಟ್‌ನಲ್ಲಿ ಎಲ್ಲಾ ಬಡವರಿಗೆ ಜಮೀನು ಹಂಚುವುದಕ್ಕೆ ಸರ್ಕಾರದವರು ಹೊರಟಿದ್ದಾರೆ ಆದರೆ ಅವರಿಗೆ ಈ ಮೂಗು ಪ್ರಾಣಿಗಳ ವಿಚಾರ ಗಮನಕ್ಕೆ ಬರಲಿಲ್ಲ ಎಂದು ಕಾಣುತ್ತದೆ. ಅಲ್ಲಿ ಎಷ್ಟು ಜಮೀನು ಇದೆಯೋ ಅಷ್ಟರಲ್ಲಿ ಎಲ್ಲಾದರೂ ಒಂದು ಕಡೆ ಕೊನೆಯಲ್ಲಿ ಅವರು ಜಮೀನು ಮಾಡಿಕೊಂಡಿದ್ದರೆ, ಅವರೆಲ್ಲಾ ಬಡವರಾಗಿದ್ದರೆ ಅವರಿಗೆ ಜಮೀನು ಇಲ್ಲದಿದ್ದರೆ ಅಂತಹವರ ಬಗ್ಗೆ ಪರಿಶೀಲನೆ ಮಾಡಬಹುದು ಆದರೆ ಅವರು ಬೇರೆ ಕಡೆ ೫೪ ಸಾವಿರಾರು ಎಕರೆ ಗದ್ದೆ ಜಮೀನು ಇದ್ದು ಅಲ್ಲಿ ಬಾವಿ ತೆಗೆಸಿ ಪಂಪ್ ಹಾಕಿಸಿದ್ದಾರೆ ಮತ್ತು ಇಲ್ಲಿ ಜಮೀನು ಹೊಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅಂತಹವರಿಗೆ ಜಮೀನು ಕೊಡುತ್ತಾ ಹೋದರೆ ಈ ಪಶುಪಾಲನೆ ಇಲಾಖೆ ಇದ್ದೂ ಅನಾವಶ್ಯಕ ಎಂದು ಕಾಣುತ್ತದೆ. ಅವರಿಗೆ ಜಮೀನು ಕೊಡಬೇಕೆನ್ನುವ ಉದ್ದೇಶ ನಿಮಗೆ ಇದ್ದರೆ ಅವರೆಲ್ಲರಿಗೂ ಜಮೀನು ಕೊಟ್ಟುಬಿಡಿ. ಈ ಮೂಗು ಪ್ರಾಣಿಗಳನ್ನೆಲ್ಲಾ ಪರದೇಶಕ್ಕೆ ಕಳಿಸಿಬಿಡಿ, ಅದನ್ನಾದರೂ ಮಾಡಿ ಸ್ವಾಮಿ, ಈ ಬಗ್ಗೆ ನನ್ನ ಸಲಹೆ ಇಷ್ಟೆ.....

ಅಧ್ಯಕ್ಷರು.—ತಮಗೂ ಅವರು ಹೇಳಿದ್ದಾರೆ, "they still continue to exist there in view of no support being given by the Revenue and Police Departments to the Department of AnimalHusbandry and Veterinary services

to evict them'' ಅಂತ. ದನಗಳಿಗೆ ಅನುಕೂಲವಾಗುವಂತೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ಸಹಾಯ ಮಾಡಿಲ್ಲ ಎಂದು ಅವರು ಹೇಳಿದ್ದಾರೆ.

SRI K.M. THAMMAIAH —The Revenue Officers are mainly responsible for these irregularities. Without knowing to whom that land belongs to they are going to ask the people to cultivate the land without asking the concerned department. Their duty is to take the opinion of the concerned department while releasing the lands and after release they must distribute it. But they are not doing. ಈ ಒಂದು ಪರಿಸ್ಥಿತಿಯಲ್ಲಿ ನಾನು ಅವರಿಗೆ ಸಲಹೆ ಕೊಡುವುದಕ್ಕೆ ಬಯಸುತ್ತೇನೆ. ಈಗ ಅಲ್ಲಿ ಆ ಜನರು ಜಮೀನು ಹಿಡಿದಿದ್ದಾರೆ ಎಂದು ಹೇಳುತ್ತಾರೆ. ಅವರಲ್ಲಿ ಯಾರಿಗೆ ಏನು ಜಮೀನು ಇಲ್ಲ–ಯಾರು ಅಲ್ಲಿ ೧೦–೧೫ ವರ್ಷದಿಂದ ಅಲ್ಲಿದ್ದಾರೆ ಅಂತಹವರಿಗೆ ಬೇರೆ ಕಡೆ ಕಾಲೋನಿ ಮಾಡಿ ಕೊಡಲಿ. ಈ ಜಮೀನು ಇದೆಯಲ್ಲ ಇದು ಬಹಳ ಉತ್ತಮವಾದ ಜಮೀನು. ಇದನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಮಾನ್ಯ ಮಂತ್ರಿಯವರು ಕೇಂದ್ರದಿಂದ ಬೇಕಾದಷ್ಟು ಪ್ರಾಜೆಕ್ಟ್‌ಗಳನ್ನು ತೆಂದಿದ್ದಾರೆ ಅದಕ್ಕೆ ಬೇಕಾದ ಅನುಕೂಲ ಇಲ್ಲದೇ ಇದ್ದಾರೆ. ಆ ಒಂದು ಪ್ರಾಜೆಕ್ಟನ್ನು ಇದರಲ್ಲಿ ಮಾಡಬಹುದು. ಅಲ್ಲಿ ಆ ಜನ ೨೦ ವರ್ಷದಿಂದ ಇದ್ದಾರೆ ಎಂದು ಹೇಳುವುದಾದರೆ, ನಾನೂ ಕೂಡ ಅಲ್ಲಿ ೨ ವರ್ಷದಿಂದ ಇದ್ದೇನೆ. ನಾನೂ ಕೂಡ ಆ ಜಮೀನನ್ನು ತೆಗೆದುಕೊಳ್ಳಬಹುದಲ್ಲ, ಅದು ಆಗಬಾರದು. ಇವತ್ತಿನ ದಿವಸ ನಮ್ಮಲ್ಲಿ ಹುಲ್ಲು ಬೆಳೆಯುವುದಕ್ಕೆ ಕಾಡು ಇಲ್ಲ. ಇದ್ದದ್ದನ್ನು ಕಡಿದುಕೊಂಡು ಹೋಗಿದ್ದಾರೆ. ನಿಮಗೆ ಸೇರಿದ ಆ ಲ್ಯಾಂಡ್‌ನಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರಿಂದ ಅಲ್ಲಿ ಗಿಡಗಳನ್ನು ಬೆಳೆಸುವುದಕ್ಕೆ ಅವಕಾಶ ಮಾಡಿ ಕೊಟ್ಟರೆ ನಿಮ್ಮ ಬಾರ್ಡರ್ ಬಂದೋಬಸ್ತ್ ಆಗುತ್ತದೆ. ಇಲ್ಲದೇಹೋದರೆ ನಾವು ಹೇಳುತ್ತಾ ಇರುತ್ತೇವೆ, ಅಲ್ಲಿ ಎನ್‌ಕ್ರೋಚ್‌ಮೆಂಟ್ ಆಗುತ್ತಾ ಇರುತ್ತದೆ. ಮಂಡಿನ ಸಾರಿ ನಾನು ಈ ಬಗ್ಗೆ ಕೊಶ್ಚನ್ಸ್ ಕೊಟ್ಟರೆ ಆ ಹೊತ್ತಿಗೆ ಇನ್ನೂ ೭೦೦ ಎಕರೆಯಲ್ಲಿ ಎನ್‌ಕ್ರೋಚ್‌ಮೆಂಟ್ ಆಗುತ್ತದೆ. ಆಗ ಅದನ್ನು ಅವರಿಗೆ ರಿಲೀಸ್ ಮಾಡಬೇಕೆಂದು ನೀವೇ ಹೇಳುತ್ತೀರಿ. ಅದು ಆಗಬಾರದು. ನಾನು ಹೇಳ ತಕ್ಕಂಥಾದ್ದನ್ನು ಪರಿಶೀಲನೆ ಮಾಡಿ ಈ ಉತ್ತಮವಾದ ಜಮೀನಿನಲ್ಲಿ ಒಂದು ಎಕರೆಯನ್ನೂ ಸಹ ಆ ಜನರಿಗೆ ಕೊಡಕೂಡದು. ಇದನ್ನು ದನಕರುಗಳಿಗೆ ಮಾತ್ರ ಮೀಸಲಾಗಿಡಬೇಕು. ಈ ಗೋಸದನಕ್ಕೆ ೧೮ ಲಕ್ಷ ರೂಪಾಯಿಗಳನ್ನು ಸರ್ಕಾರದವರು ಕೊಟ್ಟಿದ್ದಾರೆ. ಎಲ್ಲಾ ತರದಲ್ಲೂ ಇದನ್ನು ಅಭಿವೃದ್ಧಿ ಪಡಿಸಿ ಆ ಮೂಗುಪ್ರಾಣಿಗಳಿಗೆ ಅನುಕೂಲ ಮಾಡಿಕೊಡುತ್ತೀರಾ ಎಂದು ನಾನು ನಂಬಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಸ್ವಾಮಿ, ಮಾನ್ಯ ಮಂತ್ರಿಯವರು ಉತ್ತರ ಕೊಡುವುದಕ್ಕೆ ಮುಂಚೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ತಿಮ್ಮಕ್ಕನಹಳ್ಳಿ ಕಾವಲಿಗೆ ಈ ಒಂದು ಹೆಸರು ಇದೆ. ಇದು ದನ ಮೇಯುವುದಲ್ಲ, ಇಲಾಖೆಯವರು ಮತ್ತು ಕಾವಲುಗಾರರು ಮೇಯುವುದ ಕ್ಕೋಸ್ಕರ ಅದನ್ನು ಇಟ್ಟುಕೊಂಡಿದ್ದಾರೆ ಎಂದು ಕೆಲವರು ಹೇಳುತ್ತಾರೆ. ಇದು ಸರ್ಕಾರದವರ ಗಮನ ದಲ್ಲಿದೆಯೇ? ಅಲ್ಲಿ ದನಗಳನ್ನು ಮೇಯಿಸುವುದಕ್ಕೆ ಇಲಾಖೆಯವರು ಹುಲ್ಲನ್ನು ಬೆಳೆಸಬೇಕು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸಾವಿರ ಎಕರೆಯಲ್ಲಿ ನೀವು ಸುಮಾರು ೧೦ ಸಾವಿರ ದನಗಳನ್ನು ಸಾಕ ಬಹುದು. ಆದ್ದರಿಂದ ಮೊದಲು ಈ ಬಡವರ ಹೊಟ್ಟೆಗೆ ಇಲ್ಲದೇ ಇರುವವರ ತೊಂದರೆಗಳನ್ನು ಗಮನಕ್ಕೆ ತೆಗೆದುಕೊಂಡು ಆಮೇಲೆ ಬಾಕಿ ಕೆಲಸಗಳನ್ನು ಮಾಡಿ ಎಂದು ನಾನು ನಿಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ಅವು ಸ್ವಲ್ಪ ವೈಲ್ಡ್ ಆಗಿರುತ್ತವೆ, ಅವು ಓಡಾಡುವುದಕ್ಕೆ ಜಾಗ ಕೊಡಬೇಕಾಗುತ್ತದೆ. ನಮ್ಮಲ್ಲಿ ಈಗಾಗಲೇ ಅಮೃತಮಹಲ್ ಬ್ರೀಡ್ ಮತ್ತು ಹಳ್ಳಿಕಾರ್ ಬ್ರೀಡ್‌ಗಳು ಕಡಿಮೆ ಯಾಗುತ್ತಿವೆ ಈ ಎರಡೂ ತಳಿಗಳು ನಶಿಸಿ ಹೋಗುತ್ತಿವೆ. ಈ ಎರಡೂ ಒಳ್ಳೆಯ ಬ್ರೀಡ್‌ಗಳಾಗಿವೆ. ಹಳ್ಳಿಯ ಮೈಸೂರಿನಲ್ಲಿ ಇವೆರಡು ತಳಿಗಳು ಹೆಚ್ಚಿನ ರೀತಿಯಲ್ಲಿ ಉತ್ತಮವಾದ ತಳಿಗಳಾಗಿದೆ. ಈ ತಳಿಗಳಲ್ಲಿ ೨ ಸಾವಿರ ಹೋರಿಗಳು ಇವೆ ಎಂದರೆ ಅವೆನ್ನು ಯಾರೂ ಹಿಡಿಯುವುದಿಲ್ಲ ಮತ್ತು ಕಟ್ಟುವುದಿಲ್ಲ. ಸರ್ಕಾರದವರು ಅವುಗಳನ್ನು ಬೇರೆಯವರಿಗೆ ಕೊಟ್ಟಮೇಲೆ ಅವನ್ನು ಕಟ್ಟುತಕ್ಕಂಥಾದ್ದು ಇದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದು ನೂರಕ್ಕೆ ನೂರರಷ್ಟು ನಿಜ. ಈ ತಳಿಗಳನ್ನು ಹೆಚ್ಚಿನ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಬೆಳೆಸಬೇಕು. ಈ ದಿಶೆಯಲ್ಲಿ ನಾನು ಹೇಳುವುದೇನೆಂದರೆ ಆ ತಳಿಗಳನ್ನು ಬೆಳೆಸುವುದಕ್ಕೆ ೫೦ ಸಾವಿರ ಎಕರೆಗಳಷ್ಟು ಜಮೀನು ಬೇಕಾಗಿಲ್ಲ. ೧೦ ಸಾವಿರ ಎಕರೆಯಲ್ಲಿ ಹುಲ್ಲನ್ನು ಬೆಳೆಸಿ ಅದರ ೧೦ರಷ್ಟು ದನಗಳನ್ನು ಸಾಕಬಹುದು.

ಅಧ್ಯಕ್ಷರು.—ನಿಮಗೆ ಅಮೃತಮಹಲ್ ತಳಿ ಬಗ್ಗೆ ಗೊತ್ತಿಲ್ಲ, ನಿಮಗೆ ಸೊಪ್ಪಿನ ಬೆಟ್ಟ ಗೊತ್ತು.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ ಈಗ ಒಬ್ಬ ಸದಸ್ಯರು ಹೇಳಿದರು ಈ ಅಮೃತಮಹಲ್ ಕಾವಲನ್ನು ಇಟ್ಟುಕೊಂಡು ಸರ್ಕಾರದವರೇ ಅಭಿವೃದ್ಧಿಯನ್ನು ಮಾಡಬೇಕೆಂದು ಮತ್ತೊಬ್ಬ ಸದಸ್ಯರು ಹೇಳಿದರು ಈ ಅಮೃತಮಹಲ್ ಕಾವಲನ್ನು ಜನಗಳಿಗೆ ಕೊಡಬೇಕೆಂದು. ಆದ್ದರಿಂದ ನಾನು ಈಗಾಗಲೇ ಈ ಮಾನ್ಯ ಸಭೆಯಲ್ಲಿ ಒಂದು ಮಸೂದೆಯನ್ನು ಮಂಡಿಸಿದ್ದೇನೆ. ಈ ಅಮೃತಮಹಲ್ ಕಾವಲನ್ನು ಯಾರಿಗೂ ಕೊಡುವುದಕ್ಕೆ ಆಗುವುದಿಲ್ಲ. ಈ ಅಮೃತಮಹಲ್ ಕಾವಲು ಸರ್ಕಾರದವರೆ ಇಟ್ಟುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಮತ್ತೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ತಮ್ಮಯ್ಯ ನವರು ಹೇಳಿದರು ಈ ಅಮೃತಮಹಲ್ ಕಾವಲನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಕೊಟ್ಟುಬಿಡಿ ಎಂದು. ಆದರೆ ಸರ್ಕಾರದವರು ಈಗಾಗಲೇ ೨೮ಕೋಟಿ ರೂಪಾಯಿಗಳ ಒಂದು ಯೋಜನೆ ತಂದು ಈ ಅಮೃತಮಹಲ್ ಕಾವಲಿಗೆ ಸಂತ್ತಲು ಬೇಲಿಯನ್ನು ಹಾಕಿಸಿ ಇದರಲ್ಲಿ ಹುಲ್ಲು ಬೆಳೆಯತಕ್ಕಂತಹ ಒಂದು ಕಾರ್ಯಕ್ರಮಕ್ಕೆ ಸರ್ಕಾರದವರು ಮನ್ನಣೆಯನ್ನು ಕೊಟ್ಟಿದ್ದಾರೆ. ಅದನ್ನು ಆದಷ್ಟು ಜಾಗ್ರತೆಯಾಗಿ ಜಾರಿಗೆ ತರುತ್ತೇವೆ.

ಶ್ರೀ ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಈ ಹುಲ್ಲು ಗಾವಲುಗಳು ಜಿಲ್ಲಾವಾರು ಎಷ್ಟೆಷ್ಟು ಎಕರೆ ಜಮೀನು ಇದೆ. ಮತ್ತು ಇದರಲ್ಲಿ ಎಷ್ಟು ಜಮೀನನ್ನು ಅಕ್ರಮ ಪ್ರವೇಶ ಮಾಡಿಕೊಂಡಿದ್ದಾರೆ.?

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ ಎಲ್ಲಾ ಜಿಲ್ಲೆಗಳಲ್ಲಿಯೂ ಹುಲ್ಲುಗಾವಲು ಇಲ್ಲ. ಕೇವಲ ೬ ಜಿಲ್ಲೆಗಳಲ್ಲಿ ಮಾತ್ರ ಈ ಹುಲ್ಲುಗಾವಲುಗಳು ಇವೆ. ಅವು ಯಾವುವೆಂದರೆ ಚಿಕ್ಕಮಗಳೂರಿನಲ್ಲಿ ೧೩,೨೪೧ ಎಕರೆ ಜಮೀನು ಇದೆ. ಇದರಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವ ಜಮೀನು ೨,೨೦೪ ಎಕರೆಗಳು. ಚಿತ್ರದುರ್ಗದಲ್ಲಿ ೨೨,೦೧೮ ಎಕರೆ ಜಮೀನು ಇದರಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವ ಜಮೀನು ೧,೨೮೩ ಎಕರೆಗಳು ಮತ್ತು ಹಾಸನ ಜಿಲ್ಲೆಯಲ್ಲಿ ೧೧,೨೩೫ ಎಕರೆಗಳು ಮತ್ತು ಇದರಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವ ಜಮೀನು ೩,೫೭೫ ಎಕರೆಗಳಷ್ಟು. ಮಂಡ್ಯದಲ್ಲಿ ೩೫೯ ಎಕರೆಗಳು ಇದರಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವ ಜಮೀನು೦ ಬರೀ ೧೪ ಎಕರೆಗಳು ಮಾತ್ರ. ಮತ್ತು ಶಿವಮೊಗ್ಗದಲ್ಲಿ ೩೦೦೦ ಎಕರೆಗಳು ಇದರಲ್ಲಿ ಎನ್‌ಕ್ರೋಚ್‌ಮೆಂಟ್ ಏನೂ ಇಲ್ಲ. ತುಮಕೂರಿನಲ್ಲಿ. ೩,೩೨೪ ಎಕರೆಗಳು ಮತ್ತು ಇದರಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವ ಜಮೀನು ೭೯೬ ಎಕರೆಗಳು ಮಾತ್ರ. ಒಟ್ಟು ೫೭,೧೭೯ ಎಕರೆಗಳು. ಅಕ್ರಮ ಪ್ರವೇಶ ಮಾಡಿರತಕ್ಕಂತಹ ಜಮೀನು ೭,೮೭೪ ಎಕರೆಗಳು.

Representation by a Member

Re. Evening College run by Sri Jagadguru Renukacharya Society at Bangalore.

SRI C. M. ARMUGHAM.—Sir, I have a matter to bring the notice of the Government. The Education Minister is not here. Well. Since it is a joint responsibility of the Cabinet some Minister who is present here can reply. There is a college run by Sri Jagadguru Renukacharya Society. They were running an evening college. There were about 1200 students studying in the evening session. The evening college is useful to the officials who wish to continue their study after attending